ಎಂಜಿನಿಯರ್‌ಗಳು ಸಿದ್ಧಮಾಡುವ ಯೋಜನೆಗಳಿಗೆ ಪ್ರಜೆಗಳ ಅನುಮತಿ ಪಡೆಯುವುದಾಗಲಿ ಅಥವಾ ಅವರಿಗೆ ಮಾಹಿತಿ ಕೊಡುವುದಾಗಲಿ ಅವಶ್ಯಕವೆಂದು ಯಾರೂ ಭಾವಿಸುವುದಿಲ್ಲ. 1918ರಿಂದ ಶುರುವಾಗಿ 1941ರವರೆಗೆ ನಡೆಯುವ ಸರ್ವೆಗಳು, ಕಾಡುಗಳನ್ನು ಸವರಿ ಹಾಕುವ ಕೆಲಸಗಳು, ರಸ್ತೆ ನಿರ್ಮಾಣ, ಆಮೇಲೆ ಕಾಲನಿ ನಿರ್ಮಾಣ, ಇವೆಲ್ಲವೂ ತನ್ನ ಸಾಮಾನ್ಯ ಅಧಿಕಾರವೆಂದು ಪ್ರಭುತ್ವವು ಭಾವಿಸುತ್ತದೆ. ಇಲ್ಲಿಯ ಜನರನ್ನು ಅವರ ಅಸ್ತಿತ್ವವನ್ನು ಅದು ಈವರೆಗೆ ಗಮನಿಸಿಯೇ ಇಲ್ಲ. ಹೀಗಾಗಿ ಜನರು ಮೊದಲು ಇದೆಲ್ಲಾ ವದಂತಿಯೆಂದುಕೊಳ್ಳುತ್ತಾರೆ. ವಿಶೇಷವೆಂದರೆ, ಅವರಿಗೆ ಕೂಡ ಈ ಭೂಮಿ, ಈ ಕಾಡಿನ ಮೇಲೆ ನಮಗೆ ಹಕ್ಕಿದೆ ಎನ್ನುವ ಕಲ್ಪನೆಯಿಲ್ಲ. ಹೀಗಾಗಿ ಸರಿಯಾಗಿ ನೋಡಿದರೆ ಯೋಜನೆಯ ನೆಪದಲ್ಲಿ ಪ್ರಭುತ್ವ ಮಾಡುವ ಆಕ್ರಮಣ, ಹೊರಗಣ ಯಾವುದೇ ಶತ್ರುವಿನ ಆಕ್ರಮಣದಿಂದ ಬೇರೆಯಾಗಿಲ್ಲ. ತಾನು ಪ್ರಜೆಗಳಿಗಾಗಿ ಇದನ್ನೆಲ್ಲ ಮಾಡುತ್ತಿದ್ದೇನೆ ಎನ್ನುವ ಸ್ವ-ಸಮರ್ಥನೆ ಅದಕ್ಕಿದೆ. ಆದರೆ, ಇದರ human cost ಬಗ್ಗೆ ಅದು ಅಜ್ಞಾನಿಯಾಗಿದೆ. ಹೀಗಾಗಿ ಕೃಷ್ಣರಾಯರು ಕರಾರುವಾಕ್ಕಾಗಿ ಎಷ್ಟು ಕಾಡು, ಎಷ್ಟು ಜಮೀನುಗಳು ಮುಳುಗಡೆಯಾಗುತ್ತಿವೆ ಎಂದು ಅಂಕಿ ಸಂಖ್ಯೆ ಮೂಲಕ ಹೇಳಬಲ್ಲರು. ಆದರೆ, ಅಣ್ಣ ದತ್ತಪ್ಪ ಹಾಗೂ ತನ್ನ ಜಾನುವಾರುಗಳಿಂದ ದೂರ ಹೋಗಬೇಕಾಗುತ್ತದೆ ಎಂದು ಮಾಣಿ ಚಿಕ್ಕಪ್ಪ ಭೋರೆಂದು ಅಳುವುದು ಅವರಿಗೆ ಅರ್ಥವಾಗುವುದಿಲ್ಲ. ಭಾರಂಗಿ ಮನೆಯೊಂದಿಗೆ ತಾನೂ ಮುಳುಗಡೆ ಆಗಬೇಕು ಎಂದು ದತ್ತಪ್ಪ ಹೆಗಡೆ ಏಕೆ ನಿರ್ಧರಿಸುತ್ತಾರೆ ಎಂದು ಅವರಿಗೆ ಅರ್ಥವಾಗದು.

ಪ್ರಭುತ್ವದ ಅಗೋಚರ ಹಿಂಸೆಯ ಹಲವು ಮುಖಗಳನ್ನು ಅತ್ಯಂತ ಸೂಕ್ಷ್ಮವಾಗಿ ಬರಹಗಾರರು ಹಿಡಿದು ಕೊಡುತ್ತಾರೆ. ಯೋಜನೆಗಾಗಿ ಬರುವ ಅಧಿಕಾರಿಗಳ ಕಾಲನಿಯು ಸ್ಥಳೀಯರಿಗೆ ಒಂದು ಬೇರೆ ದೇಶವಾಗುತ್ತದೆ. ಪರವಾನಗಿ ಇಲ್ಲದೆ ಪ್ರವೇಶವಿಲ್ಲ, ಜೋಗ ಜಲಪಾತವನ್ನು ನೋಡಲೂ ಇನ್ನು ಮೇಲೆ ಲಂಚಕೊಡಬೇಕು. ಅನೇಕ ಮಹಾರಾಜರಿಗೆ, ಬ್ರಿಟಿಷ್ ಅಧಿಕಾರಿಗಳಿಗೆ ಆತಿಥ್ಯ ಒದಗಿಸಿದ ವಟ್ಟಕ್ಕಿ ಮನೆತನಕ್ಕಿದ್ದ ಕೊತವಾಲಗಿರಿಯನ್ನು ಕಿತ್ತುಕೊಳ್ಳಲಾಗುತ್ತದೆ. ಪರಿಣಾಮವೆಂದರೆ ಆ ಕುಟುಂಬವೇ ಛಿದ್ರವಾಗುತ್ತದೆ. ಮಹಾರಾಜರ ಉಪಸ್ಥಿತಿಯಲ್ಲಿ ಪೂಜೆ ನೆರವೇರಿಸಲು ಬಂದ ಭಟ್ಟರಿಗೆ ಅವರು ಆದೇಶ/ಆಹ್ವಾನ ಪತ್ರ ತರದಿದ್ದರಿಂದ ಪ್ರವೇಶ ನಿರಾಕರಿಸಲಾಗುತ್ತದೆ. ಕಾದಂಬರಿಯ ಅದ್ಭುತವಾದ ಭಾಗವೆಂದರೆ, ಮಹಾರಾಜರು ಬರುತ್ತಿರುವುದರಿಂದ ಕಾರ್ಯಕ್ರಮಕ್ಕೆ ಬರುವ ಎಲ್ಲರೂ ವ್ಯಾಕ್ಸಿನೇಷನ್ ಮಾಡಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಮುರಾರಿ ಭಟ್ಟರ ವ್ಯಾಖ್ಯಾನ. ಅವರ ಪ್ರಶ್ನೆಯೆಂದರೆ, ಈವರೆಗೆ ಸರ್ಕಾರವು ನಮ್ಮನ್ನು ಮಲೇರಿಯಾದಿಂದ ರಕ್ಷಿಸಲು ವ್ಯಾಕ್ಸಿನೇಟ್ ಮಾಡಿರಲಿಲ್ಲ. ಈಗ ಅದು ಯಾಕೆ ಮಾಡುತ್ತಿದೆಯೆಂದರೆ, ಅದರ ದೃಷ್ಟಿಯಲ್ಲಿ ನಾವು ರೋಗಾಣುಗಳಿಂದ ತುಂಬಿದ ಅಪಾಯಕಾರಿಗಳು! ಈ ಭಾಗವನ್ನು ಮಾತ್ರ ಬರೆದಿದ್ದರೂ ಬರಹಗಾರರು ಕನ್ನಡದ ಮುಖ್ಯ ಬರಹಗಾರರಾಗುತ್ತಿದ್ದರು! ಶಾಲೆ ಆರಂಭವಾಗಿದೆ, ಬಸ್ಸುಗಳು ಬರುತ್ತಿವೆ, ಆದರೆ ಕಾಲನಿ ಮಕ್ಕಳಿಗೆ ಫ್ರೀ ಪಾಸ್ ಮತ್ತು ಮೊದಲ ಸವಾರಿ. ಸ್ಥಳೀಯ ಮಕ್ಕಳಿಗೆ ಇಲ್ಲ. ಜನರಿಗಾಗಿ ಆಸ್ಪತ್ರೆ ಕಟ್ಟಿದ್ದೇವೆ ಎಂದು ಡಂಗುರ ಸಾರಿದ್ದರೂ, ಚಿಕಿತ್ಸೆ ಸಿಕ್ಕದೆ ಗರ್ಭಿಣಿ ಹೆಂಗಸು ಸಾಯುತ್ತಾಳೆ. ಬಹಳ ಸ್ಪಷ್ಟವಾಗಿವೆ. ಈಗ ಅಸ್ತಿತ್ವಕ್ಕೆ ಬಂದಿರುವುದು ಮಾನವೀಯತೆ ಇಲ್ಲದ ಒಂದು ಆಡಳಿತಶಾಹಿ. ಅದು ಭೀಕರವಾದ ಅಸಮಾನತೆಯನ್ನು ತಂದಿದೆ. ಆದರೆ, ಇದು ಅಗೋಚರ. ಮಹಾರಾಜರ ಪ್ರಗತಿಪರ ರಾಜ್ಯದ ಅಭಿವೃದ್ಧಿಯಲ್ಲಿ ಪ್ರಜೆಗಳು ಹೆಮ್ಮೆಯಿಂದ ಎಲ್ಲವನ್ನೂ ತ್ಯಾಗ ಮಾಡಬೇಕು.

ಕೊನೆಯ ಭಾಗದಲ್ಲಿ ಈ ಯೋಜನೆ, ಈ ಅಭಿವೃದ್ಧಿ ಬೇಕಿತ್ತೆ ಎನ್ನುವ ಪ್ರಬಲವಾದ ಭಾವನೆ ಓದುಗರಿಗೆ ಬರುತ್ತದೆ. ವಂದನಾ ಶಿವಾ ಅವರು ತಮ್ಮ ಕೃತಿಯಲ್ಲಿ ಒಬ್ಬ ವ್ಯಕ್ತಿಯ ಉದ್ಗಾರವನ್ನು ಪ್ರಸ್ತಾಪಿಸುತ್ತಾರೆ. 'ನಮ್ಮನ್ನು ನಮ್ಮ ಪಾಡಿಗೆ ಬಿಡಿ. ನಮಗೆ ಅಭಿವೃದ್ಧಿಯಿಂದ ಸುಸ್ತಾಗಿದೆ.' ಇದು ಸ್ಥಳೀಯ ಜನರ ಭಾವನೆಯಾಗಿದೆ. ಪ್ರಶ್ನೆಯೆಂದರೆ ಜನರ ಅಭಿವೃದ್ಧಿ ಏನು? ಹೇಗೆ? ಎನ್ನುವುದನ್ನು ಪ್ರಭುತ್ವ ಹೇಗೆ ಮತ್ತು ಏಕೆ ನಿರ್ಧರಿಸುತ್ತದೆ? ಈ ಅಧಿಕಾರವನ್ನು ಯಾರು ಅದಕ್ಕೆ ಕೊಟ್ಟರು? ಅದರಲ್ಲೂ ಇಂಥ ಅಭಿವೃದ್ಧಿಯಿಂದ ಸಾವಿರಾರು ವರ್ಷಗಳಿಂದ ಇರುವ ಸ್ಥಳೀಯ ಸಮಾಜಗಳು, ಸಂಸ್ಕೃತಿಗಳು ನಾಶವಾಗುವ ಸಾಧ್ಯತೆ